# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ಇವರು ಶ್ರೀ ನರಸಿಂಹರಾಜ ಜಿಲ್ಲಾ ಆಸ್ಪತ್ರೆ, ಕೋಲಾರ ಇಲ್ಲಿಗೆ ಬಹುತೇಕವಾಗಿ ಕಡುಬಡವ ಹಾಗೂ ಕೂಲಿ ಕಾರ್ಮಿಕರು ತಮ್ಮ ಆರೋಗ್ಯ ತಪಾಸಣೆಗಾಗಿ ಇದೇ ಆಸ್ಪತ್ರೆಯನ್ನು ಅವಲಂಬಿಸಿರುತ್ತಾರೆ ಹಾಗೂ ಕೋಲಾರ ನಗರ, ಪಕ್ಕದ ಮೂರು ರಾಜ್ಯಗಳಿಗೆ ಗಡಿ ಜಿಲ್ಲೆಯಾಗಿದ್ದು, ಇಲ್ಲಿ ಪ್ರತಿ ನಿತ್ಯ ಸುಮಾರು 1300 ರಿಂದ 1500 ಹೊರ ರೋಗಿಗಳು ಮತ್ತು 300 ರಿಂದ 450 ಒಳರೋಗಿಗಳು ದಾಖಲಾಗಿ ಚಿಕಿತ್ಸೆ ಪಡೆಯುತ್ತಿರುತ್ತಾರೆ. ಈ ಆಸ್ಪತ್ರೆಯು 500 ಹಾಸಿಗೆಗೆ ಸಾಮರ್ಥ್ಯ ಹೊಂದಿದ್ದು, ಪ್ರಸ್ತುತ 265 ಹಾಸಿಗೆಗಳ ಸಾಮರ್ಥ್ಯಕ್ಕೆ ಮಾತ್ರ ವೈದ್ಯರು ಮತ್ತು ಅರೆ ವೈದ್ಯಕೀಯ ಸಿಬ್ಬಂದಿಗಳು ಮಾತ್ರ ಕಾರ್ಯನಿರ್ವಹಿಸುತ್ತಿದ್ದಾರೆ ಇದರೊಂದಿಗೆ ಕೋವಿಡ್-19 ಸಾಂಕ್ರಾಮಿಕ ರೋಗದ ನಿರ್ವಹಣೆಗೆ ಆಸ್ಪತ್ರೆಯಲ್ಲಿ ರಚಿಸಲಾಗಿರುವ ಐ ಸಿ ಯು ಹಾಗೂ ಆಮ್ಲಜನಕ ಬೆಂಬಲಿತ ಹಾಸಿಗೆಗಳ ನಿರ್ವಹಣೆಗಾಗಿ ವೈದ್ಯರು ಹಾಗೂ ವೈದ್ಯೇತರ ಸಿಬ್ಬಂದಿಗಳಾದ ಶುಶ್ರೂಷಾಧಿಕಾರಿಗಳು ಹಾಗೂ ಗ್ರೂಪ್-ಡಿ ಸಿಬ್ಬಂದಿಗಳು ಅವಶ್ಯಕತೆ ಇದ್ದು, ಸಾಮರ್ಥ್ಯಕ್ಕೆ ತಕ್ಕಂತೆ ಸಿಬ್ಬಂದಿಗಳ ಹುದ್ದೆಗಳನ್ನು ಮಂಜೂರಾತಿಗಾಗಿ, ಜಿಲ್ಲಾ ಶಸ್ತ್ರ ಚಿಕಿತ್ಸಕರು ಶ್ರೀ ನರಸಿಂಹರಾಜ ಜಿಲ್ಲಾ ಆಸ್ಪತ್ರೆ ಇವರು ಸರ್ಕಾರಕ್ಕೆ ಪತ್ರವನ್ನು ಬರೆದಿರುತ್ತಾರೆ. ಈ ಹಿಂದೆ ಕೋವಿಡ್ ಸಂದರ್ಭದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಗ್ರೂಪ್—ಡಿ ಸಿಬ್ಬಂದಿಗಳನ್ನು ತೆಗೆದುಹಾಕಿರುವುದರಿಂದ, ಇಲ್ಲಿ ಸಾಕಷ್ಟು ಸಮಸ್ಯೆಯಾಗಿರುವುದರಿಂದ ಸರ್ಕಾರ ಈ ಕೂಡಲೇ ಶ್ರೀ ನರಸಿಂಹರಾಜ ಜಿಲ್ಲಾ ಆಸ್ಪತ್ರೆಯ ಹಾಸಿಗೆಗಳ ಸಾಮರ್ಥ್ಯಕ್ಕೆ ತಕ್ಕಂತೆ, ವೈದ್ಯರು, ಶುಶ್ರೂಷಾಧಿಕಾರಿಗಳು ಹಾಗೂ ಗ್ರೂಪ್-ಡಿ ಸಿಬ್ಬಂದಿಗಳನ್ನು ನೇಮಕ ಮಾಡಬೇಕಾಗಿರುವುದರಿಂದ ನಿಯಮ 72ರ ಅಡಿಯಲ್ಲಿ ಪ್ರಸ್ತಾಪಿಸಿರುವ ವಿಷಯದ ಕುರಿತು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಹೇಳಿಕೆ.

*******

**400 ಹಾಸಿಗೆಗಳ ಶ್ರೀ ನರಸಿಂಹರಾಜ ಜಿಲ್ಲಾ ಆಸ್ಪತ್ರೆ, ಕೋಲಾರ ಮತ್ತು 100 ಹಾಸಿಗೆಗಳ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಇಲ್ಲಿಗೆ ಮಂಜೂರಾತಿ/ಕಾರ್ಯನಿರತ/ಖಾಲಿ ಹುದ್ದೆಗಳ ವಿವರ:**

| ಕ್ರ.ಸಂ | ಹುದ್ದೆ | ಮಂಜೂರಾತಿ | ಕಾರ್ಯನಿರತ | ಖಾಲಿ |
|---|---|---|---|---|
| 1 | ಗ್ರೂಪ್ "ಎ" ವೈದ್ಯಾಧಿಕಾರಿಗಳು/ ತಜ್ಞವೈದ್ಯರು/ಮುಖ್ಯ ಫಾರ್ಮಸಿಸ್ಟ್ | 40+1 | 32 | 09 |
| 2 | ಗ್ರೂಪ್ "ಬಿ" | 07 | 05 | 02 |
| 3 | ಗ್ರೂಪ್ "ಸಿ" | 143 | 65 | 78 |
| 4 | ಗ್ರೂಪ್ "ಡಿ" | 95 | 17 | 78 |
| 5 | ಎನ್.ಹೆಚ್.ಎಂ ಅಡಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ವೈದ್ಯರು ಮತ್ತು ಇತರೆ ಸಿಬ್ಬಂದಿ ( ಜಿಲ್ಲಾ ಆಸ್ಪತ್ರೆ+ಎಂಸಿಹೆಚ್) | 0 | 110+08 =118 | 0 |
| 6 | ನಾನ್ ಕ್ಲಿನಿಕಲ್+ ಗ್ರೂಪ್ "ಡಿ" ಹೊರಗುತ್ತಿಗೆ (78 -ಖಾಲಿ ಹುದ್ದೆಗೆ ಎದುರು ಶೇ75% ಮತ್ತು ಎಂಸಿಹೆಚ್ ಆಸ್ಪತ್ರೆಗೆ 25 ಗ್ರೂಪ್ "ಡಿ" ಹುದ್ದೆ | 0 | 58+25 =83 | 0 |
| | ಒಟ್ಟು | 286 | 320 | 167 |

ಒಂದು ವರ್ಷ ಕಡ್ಡಾಯ ಸರ್ಕಾರಿ ಸೇವೆಯಡಿ 01 ಎಂಬಿಬಿಎಸ್ ವೈದ್ಯರು ಮತ್ತು 02 ಟೆಲಿಮೆಡಿಸನ್ ವೈದ್ಯರು, ಇ.ಎನ್.ಟಿ-01, ಕೀಲು ಮತ್ತು ಮೂಳೆ ತಜ್ಞರು-01, ಮಕ್ಕಳ ತಜ್ಞರು-01, ಪೆಥಾಲಜಿ ತಜ್ಞರು-01 ಒಟ್ಟು: 07 ವೈದ್ಯರು ಮತ್ತು ತಜ್ಞರು ಕಾರ್ಯನಿರ್ವಹಿಸುತ್ತಿರುತ್ತಾರೆ

ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ 100 ಹಾಸಿಗೆಗಳ ಸಾಮರ್ಥ್ಯಕ್ಕೆ ಸರ್ಕಾರಿ ಆದೇಶ ಸಂಖ್ಯೆ: ಆಕುಕ 105 ಹೆಚ್‌ಎಸ್‌ಎಂ 2019 ಬೆಂಗಳೂರು ದಿನಾಂಕ:29.08.2020ರಲ್ಲಿ ಹುದ್ದೆಗಳು ಮಂಜೂರಾಗಿಲ್ಲದ ಕಾರಣ ನಿರ್ದೇಶನಾಲಯದ ಅ.ಜ್ಞಾ. ಪತ್ರ ಡಿಡಿ/ಎಂ.ಹೆಚ್/78/2018-19 ದಿನಾಂಕ:27-08-2019 ರಂತೆ ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರು-04, ಕ್ಷ-ಕಿರಣ ತಂತ್ರಜ್ಞರು-01, ಶಸ್ತ್ರಚಿಕಿತ್ಸೆ ಕೋಣೆ ತಂತ್ರಜ್ಞರು-01, ಗಣಕಯಂತ್ರ ಸಹಾಯಕರು-02, ಗ್ರೂಪ್ "ಡಿ" -25 ಒಟ್ಟು: 33 ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಟೆಂಡರ್ ಕರೆದು ಸಿಬ್ಬಂದಿ ಪ್ರಯೋಜಿಸಿಕೊಳ್ಳಲಾಗಿರುತ್ತದೆ.

ಕಮಲ ನೆಹರು ಕ್ಷಯ ಮತ್ತು ಎದೆ ರೋಗಗಳ ಆಸ್ಪತ್ರೆ, ಕೋಲಾರ ಇಲ್ಲಿನ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಎಸ್.ಎನ್.ಆರ್ ಜಿಲ್ಲಾ ಆಸ್ಪತ್ರೆಯ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ.

| ಕ್ರ.ಸಂ | ಹುದ್ದೆ | ಮಂಜೂರಾತಿ | ಕಾರ್ಯನಿರತ | ಖಾಲಿ |
|---|---|---|---|---|
| 1 | ಗ್ರೂಪ್ "ಎ" ವೈದ್ಯಾಧಿಕಾರಿಗಳು/ ತಜ್ಞವೈದ್ಯರು/ | 7 | 05 | 02 |
| 2 | ಗ್ರೂಪ್ "ಬಿ" | 0 | 0 | 0 |
| 3 | ಗ್ರೂಪ್ "ಸಿ" | 41 | 4 | 37 |
| 4. | ಗ್ರೂಪ್ "ಡಿ" | 64 | 01 | 63 |
| | | 112 | 10 | 102 |

ಗ್ರೂಪ್ "ಡಿ" 63 ಖಾಲಿ ಹುದ್ದೆಗೆ ಶೇ75% ರಂತೆ ಗ್ರೂಪ್ "ಡಿ" + ನಾನ್ ಕ್ಲಿನಿಕಲ್ ಸಿಬ್ಬಂದಿ 47 ಮಂದಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿರುತ್ತದೆ.

**ಗ್ರೂಪ್ "ಬಿ" ಮತ್ತು "ಸಿ" ಹುದ್ದೆ- ಶುಶ್ರೂಷಕ ಅಧಿಕಾರಿಗಳ ವಿವರ**

| ಎಸ್.ಎನ್. ಆರ್ ಜಿಲ್ಲಾ ಆಸ್ಪತ್ರೆ | ಮಂಜೂರಾತಿ | ಕಾರ್ಯನಿರತ | ಖಾಲಿ |
|---|---|---|---|
| ಶುಶ್ರೂಷ ಅಧೀಕ್ಷರು ದರ್ಜೆ-1 | 1 | 0 | 1 |
| ಶುಶ್ರೂಷ ಅಧೀಕ್ಷಕರು ದರ್ಜೆ-2 | 3 | 0 | 3 |
| ಹಿರಿಯ ಶುಶ್ರೂಷಕ ಅಧಿಕಾರಿ | 7 | 3 | 4 |
| ಶುಶ್ರೂಷಕ ಅಧಿಕಾರಿ | 65 | 38 | 27 |
| ಒಟ್ಟು | 76 | 41 | 35 |

ಖಾಲಿ ಹುದ್ದೆಯ ಎದುರು ಹಿರಿಯ ಶುಶ್ರೂಷಕ ಅಧಿಕಾರಿಗಳನ್ನು ಶುಶ್ರೂಷಕ ಅಧೀಕ್ಷಕರು ದರ್ಜೆ-1 ಮತ್ತು ಶುಶ್ರೂಷಕ ಅಧೀಕ್ಷಕರು ದರ್ಜೆ-2 ಹುದ್ದೆಗೆ ತಾತ್ಕಾಲಿಕವಾಗಿ ಪ್ರಭಾರದಲ್ಲಿರಿಸಿದೆ. ಎನ್. ಹೆಚ್.ಎಂ ಅಡಿಯಲ್ಲಿ 62 ಶುಶ್ರೂಷಕ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ.

ಗ್ರೂಪ್ "ಡಿ" ಹುದ್ದೆಗಳ ವಿವರ

| | ಮಂಜೂರಾತಿ | ಕಾರ್ಯನಿರತ | ಖಾಲಿ |
|---|---|---|---|
| ಎಸ್.ಎನ್. ಆರ್ ಜಿಲ್ಲಾ ಆಸ್ಪತ್ರೆ | 95 | 17 | 78 |
| ಕೆ.ಎನ್.ಟಿ.ಬಿ ಆಸ್ಪತ್ರೆ | 64 | 01 | 63 |
| ಎಂ.ಸಿ.ಹೆಚ್ ಆಸ್ಪತ್ರೆಗೆ ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿರುತ್ತದೆ. | - | 25 | |
| ಒಟ್ಟು | **159** | **43** | **141** |

ಖಾಲಿ ಹುದ್ದೆ:141 ಕ್ಕೆ ಶೇ75% ರಂತೆ ನಾನ್ ಕ್ಲಿನಿಕಲ್ ಮತ್ತು ಗ್ರೂಪ್ "ಡಿ" ನೌಕರರನ್ನು 105+25*=130 ಸಿಬ್ಬಂದಿಯವರನ್ನು ಟೆಂಡರ್ ಕರೆದು ಮಾನವ ಸಂಪನ್ಮೂಲ ಏಜನ್ಸಿಗಳಿಂದ ಪ್ರಾಯೋಜಿಸಿಕೊಳ್ಳಲಾಗಿರುತ್ತದೆ.

**ಆಕುಕ 03 ಹೆಚ್‌ಎಸ್‌ಡಿ 2023.**

(ಡಾ ಕೆ ಸುಧಾಕರ್)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು